ಮನುಷ್ಯನ ಮನಸ್ಸು ವಿಚಿತ್ರ. ಯಾವಾಗ ಯಾರ ಮನದೊಳಗೆ ಸಿಲುಕಿಕೊಳ್ಳುವುದೋ ಹೇಳುವುದು ಕಷ್ಟ. ಇಲ್ಲಿಯೂ ಹಾಗೇ ಆಯಿತು. ಸುಗಂಧ ನನಗರಿವಿಲ್ಲದೆಯೇ ನನಗೆ ಹತ್ತಿರವಾದಳು' ಎಂದೆ. ಪುರುವಿನ ಮುಖದ ಬಣ್ಣ ಇಳಿದುಹೋಯಿತು. ಏನೂ ಮಾತನಾಡದೆ ಹೊರಟುಹೋದಳು.

ಮರುದಿನ ಕಿಳಿಮಾನೂರಿನಿಂದ ರಾಜವರ್ಮ ಬಂದ. ಮೈಸೂರಿನ ಮಹಾರಾಜ, ಚಾಮರಾಜ ಒಡೆಯರ್ ರವರ ಆಹ್ವಾನದ ಪತ್ರದೊಂದಿಗೆ ಬಂದಿದ್ದ. ಅಲ್ಲಿ ರಾಜ ಮನೆತನದವರ ಚಿತ್ರ ಬಿಡಿಸಲು ನನಗೆ ತುರ್ತು 'ಬುಲಾವ್' ಬಂದಿತ್ತು ಮಹಾರಾಜರಿಂದ. ನಾನು ತಕ್ಷಣ ಕಿಳಿಮಾನೂರಿಗೆ ಹೊರಡಲು ಸಿದ್ಧನಾದೆ. ನನ್ನಆತುರ ಕಂಡು ಕೆಂಡವಾದಳು ಪುರತಾರ್ಥಿ. 'ನೀನೂ ನಮ್ಮೊಂದಿಗೆ ಹೊರಡು ಪುರು. ಮೈಸೂರಿನಿಂದ ಬಂದ ಮೇಲೆ ಮಕ್ಕಳೊಂದಿಗೆ ನಿನ್ನೊಂದಿಗೆ ಕಿಳಿಮಾನೂರಿನಲ್ಲಿಯೇ ನೆಲೆಸೋಣ ಎಂದಿದ್ದೇನೆ' ಎಂದೆ. ಮೈದುನ ರಾಜವರ್ಮನಿದ್ದಾನೆಂದೂ ನೋಡದೆ ತಿರುಗಿಬಿದ್ದಳು ಪುರತಾರ್ಥಿ.

'ನನಗೇನು ಕೆಲಸ ಅಲ್ಲಿ? ಬೊಂಬಾಯಿಯಲ್ಲಿ ನಿಮಗೆ ಸುಗಂಧ ಇದ್ದಾಳೆ. ಕಿಳಿಮಾನೂರಿನಲ್ಲಿ ಬೇರಾರಿದ್ದಾರೋ ನಾನೇನು ಬಲ್ಲೆ, ನಾನೆಲ್ಲಿಯೂ ಬರುವುದಿಲ್ಲ, ನೀವು ಹೋಗಿಬನ್ನಿ' ಅವಳ ಸಿಡುಕು ಮುಖ ನೋಡಲಾರದೆ ಹೊರಬಿದ್ದೆ; ಕಿಳಿಮಾನೂರಿಗೆ ಪಯಣಿಸಿದೆ.

## ರಾಜರಾಜವರ್ಮ

ರವಿವರ್ಮನಿಗೆ ಮೈಸೂರು ಅರಮನೆಯವರ ಪ್ರತಿರೂಪ ಚಿತ್ರ ಬರೆಯಲು ಆಹ್ವಾನ ಕಳುಹಿಸಿದ್ದರು ಮಹಾರಾಜ ಚಾಮರಾಜ ಒಡೆಯರ್. ಮೈಸೂರು ಆಸ್ಥಾನ ಕಲಾವಿದರನ್ನು ಪೋಷಿಸುವ, ಪುರಸ್ಕರಿಸುವ, ಪ್ರೋತ್ಸಾಹಿಸುವ ಅತ್ಯಂತ ಪ್ರಸಿದ್ಧ ಆಸ್ಥಾನ. ಅಲ್ಲಿಯ ಮಹಾರಾಜರಾದ ಒಡೆಯರ್ ತುಂಬಾ ಹೃದಯವಂತರು. ರವಿವರ್ಮನಿಗೆ ಈ ಗೌರವ ಸಂದದ್ದು ನನಗೂ ಆನಂದ ಅವನ ಕೀರ್ತಿ ಪತಾಕೆ ದೇಶದ ಮೂಲೆ ಮೂಲೆಗಳಲ್ಲೂ ಹರಡುತ್ತಿರುವುದು ನನಗೂ ಸಂತಸ.

ಹೊರಡುವ ದಿನ ರವಿವರ್ಮನನ್ನು ನನ್ನ ಕೋಣೆಗೆ ಕರೆಸಿದೆ. ಅವನ ತಲೆ ನೇವರಿಸುತ್ತಾ ಹೇಳಿದೆ 'ನೀನು, ಮೊದಲ ಕೇಸರಿ ಎಲೆ ರಚಿಸಿದ ಕೋಣೆ ಇದೇ ಅಲ್ಲವೆ ಕೊಚ್ಚ್? ಇದೋ ಆ ಎಲೆ ಈಗ ಕಳಿತು ಉದುರುವ ಕಾಲ ಬಂದಿದೆ. ಈಗ ನಿನ್ನ ಬಣ್ಣದ ತಟ್ಟೆಯ ತುಂಬಾ ಅನೇಕ ಬಣ್ಣಗಳಿವೆ. ಅವೆಲ್ಲಾ ನೀನೇ ಸೃಷ್ಟಿಸಿರುವ ಬಣ್ಣಗಳು. ಒಬ್ಬ ಕಲಾಕಾರನಿಗೆ ಯಾವ ಬಣ್ಣಗಳನ್ನು ಉಪಯೋಗಿಸಬಾರದು ಎಂದು ತಿಳಿದಿರಬೇಕು. ಚಿತ್ರದ ಕಣ್ಣಳಲ್ಲಿ ಜೀವಕಳೆ ಮೂಢಿಸುವುದು ತುಂಬಾ ಕ್ಲಿಷ್ಟ, ನಿನ್ನ ಚಿತ್ರಗಳಲ್ಲಿ ಅದನ್ನು ಮೂಡಿಸುತ್ತೀ, ಹಾಗಾಗಿ ನಿನಗೆ ಚಿತ್ರಕಲೆ ಕರಗತವಾಗಿದೆ, ಯಾವ ಕಾರಣಕ್ಕೂ ಹಣಕ್ಕಾಗಿ ಕಲೆಯನ್ನು ಮಾರಬೇಡ, ಧನಕ್ಕಿಂತ ನಿನ್ನ ಕಲೆ ಮುಖ್ಯ ಎಂಬುದನ್ನು ನೆನಪಿಟ್ಟುಕೋ, ಎಂದಿಗೂ ಅಹಂಕಾರ ಪಡಬೇಡ, ಕಲೆಯ ಮೇಲಿನ ನಿಷ್ಠೆ ನಿನ್ನನ್ನು ಕಾಯುತ್ತದೆ' ಎನ್ನುತ್ತಾ ಅವನ ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸಿದೆ.

ರವಿವರ್ಮ ಎಂಟು ತಿಂಗಳ ಕಾಲ ಮೈಸೂರಿನ ಅರಮನೆಯಲ್ಲಿ ರಾಜವರ್ಮನೊಂದಿಗೆ ರಾಜ ಮನೆತನದವರ ಪ್ರತಿರೂಪ ಚಿತ್ರಗಳನ್ನು ರಚಿಸುವುದರಲ್ಲಿ ನಿರತನಾಗಿದ್ದ. ಅಲ್ಲಿಂದ ಅವರ ಕ್ಷೇಮ ಸಮಾಚಾರ ನಮಗೆ ತಿಳಿಯುತ್ತಲೇ ಇತ್ತು. ಇನ್ನೇನು ಅಲ್ಲಿಯ ಕೆಲಸಗಳೆಲ್ಲವೂ ಮುಗಿಯುತ್ತಾ ಬಂದಿತು ಎನ್ನುವಾಗ ನನ್ನ ಅಂತ್ಯ ಸನ್ನಿಹಿತವಾಯಿತೆಂದು ನನಗನ್ನಿಸಿತು. ಸಾಯುವ ಮುನ್ನ ಒಮ್ಮೆ ರವಿವರ್ಮನನ್ನು ನೋಡಬೇಕೆಂಬ ಆಸೆಯಾಗಿ ರವಿವರ್ಮನ ಕೆಲಸಕ್ಕೆ ತೊಂದರೆ ಎಂದು ತಿಳಿದರೂ ತಂತಿ ಕಳುಹಿಸಿದೆ.

ರವಿವರ್ಮ ತತ್‌ಕ್ಷಣವೇ ಕಿಳಿಮಾನೂರಿಗೆ ಬಂದುಬಿಟ್ಟ. ನನ್ನ ಬಳಿ ಕುಳಿತಿದ್ದ ಉಮಾಂಬಾಳನ್ನು, ನನ್ನನ್ನೂ ನೋಡಲು ನನ್ನ ಕೋಣೆಗೆ ಬಂದ. 'ಕೊಚ್ಚ್, ನಿನಗೆ ತೊಂದರೆಯಾಯಿತು, ಆದರೂ ನಿನ್ನನ್ನು ನೋಡಬೇಕೆನಿಸಿ ಕರೆಸಿಬಿಟ್ಟೆ. ಹೇಳು ನಿನ್ನ ಮೈಸೂರಿನ ಪ್ರವಾಸವನ್ನು ಕುರಿತು ವಿವರವಾಗಿ ಹೇಳು, ಕೇಳಲು ನಾವಿಬ್ಬರೂ ಕಾದಿದ್ದೇವೆ' ಎಂದೆ.

ರವಿವರ್ಮ ಹೇಳತೊಡಗಿದ 'ಮಹಾರಾಜ ಚಾಮರಾಜ ಒಡೆಯರ್‌ರವರು ನನಗೆ ಭವ್ಯಸ್ವಾಗತ ನೀಡಿದರು. ಅರ್ಧ ಅರಮನೆಯಷ್ಟು ಸ್ಥಳ ನನಗೆ ಈ ಚಿತ್ರ ರಚನೆಗಾಗಿ ಬಿಟ್ಟುಕೊಟ್ಟಿದ್ದರು. 'ನೀವು ನಮ್ಮ ಕಾಲಾನಂತರವೂ ನಮ್ಮನ್ನು ಜೀವಂತವಾಗಿಯಿಡುವಿರಿ' ಎಂದು ಕೇಳಿದ್ದೇನೆ. ಅದಕ್ಕಾಗಿಯೇ ನಿಮ್ಮನ್ನು ನಮ್ಮ ಪ್ರತಿರೂಪ ರಚನೆಗಾಗಿ ಕರೆಸಿದೆ. ನಮ್ಮ ರಾಜ ಮನೆತನದವರೆಲ್ಲರ ಚಿತ್ರಗಳನ್ನು ರಚಿಸಿಕೊಡಿ ಎಂದು ಸವಿನಯವಾಗಿ ಕೇಳಿಕೊಂಡರು. ಎರಡು ತಿಂಗಳಲ್ಲಿ ನಾನು ರಾಜ ಸೇರಿ ಎಲ್ಲವನ್ನೂ ಮುಗಿಸಿಬಿಟ್ಟೆವು. ಇನ್ನೂ ಸ್ವಲ್ಪ ಪೌರಾಣಿಕ ಚಿತ್ರಗಳನ್ನು ರಚಿಸಿಕೊಡಲು ಕೇಳಿದ್ದರು. ಅವುಗಳನ್ನು ಇಲ್ಲಿಗೇ ತಂದುಬಿಟ್ಟೆ. ಅವರ ಆನೆಯ ತೊಟ್ಟಿಯಿಂದ ಯಾವುದಾದರೂ ಎರಡು ಆನೆಗಳನ್ನು ಉಡುಗೊರೆಯಾಗಿ ಸ್ವೀಕರಿಸುವಂತೆ ಕೋರಿದರು. ನೀವು ಕೇರಳದ ರಾಜ ಮನೆತನದವರು. ಹಾಗಾಗಿ ನಿಮ್ಮಲ್ಲೂ ಆನೆಗಳಿರುವುದರಿಂದ ಇವುಗಳನ್ನು ಸಾಕುವುದು ಕಷ್ಟವಾಗಲಾರದು. ನಿಮ್ಮ ಪ್ರತಿರೂಪ ಚಿತ್ರಗಳು ಅದ್ಭುತವಾಗಿ ಮೂಢಿಬಂದಿವೆ. ನಿಮ್ಮ ಚಿತ್ರಕಲೆಗೆ ಪ್ರತಿಫಲವಾಗಿ ನಾನು ದೇವೇಂದ್ರನ ಐರಾವತವನ್ನು ಕೊಡಬೇಕು. ಆದರೆ ನನ್ನಿಂದ ಕೊಡಲು ಸಾಧ್ಯವಾಗುವುದು ಇಷ್ಟೆ' ಎನ್ನುತ್ತಾ ಬೆಳ್ಳಿ ವರಹಗಳೊಂದಿಗೆ ಆನೆಗಳನ್ನು ಬಳುವಳಿಯಾಗಿ ಕೊಟ್ಟರು. ಅಷ್ಟರಲ್ಲೇ ನನಗೆ ಬರೋಡಾ ಸಂಸ್ಥಾನದಿಂದ ಚಿತ್ರಗಳನ್ನು ಕಳುಹಿಸಿಕೊಡಲು ಕರೆಬಂದಿದೆ. ಅದಕ್ಕಾಗಿ ನಾನೇ ಸ್ವತಃ ಹೋಗಬೇಕಾಗಿದೆ. ದಿವಾನ್ ಮಾಧವ ರಾಯರು ಪತ್ರ ಬರೆದಿದ್ದಾರೆ' ಎಂದ. ನನಗೂ, ಉಮಾಂಬಾಳಿಗೂ ಅಸಾಧ್ಯ ಆನಂದವಾಯಿತು. ಇಂತಹ ಕುಲದೀಪಕನಿರುವುದು ಕಿಳಿಮಾನೂರು ಅರಮನೆಗೇ ಒಂದು ಹೆಮ್ಮೆ ಎನಿಸಿತು ನನಗೆ. ರವಿವರ್ಮನ ತಲೆಯ ಮೇಲೆ ನನ್ನ ಹಸ್ತವನ್ನಿಟ್ಟು ಹೇಳಿದೆ 'ಕೊಚ್ಚ್, ಭಾರತೀಯ ಸಂಸ್ಕೃತಿಯನ್ನು ನಿನ್ನ ಚಿತ್ರಗಳ ಮೂಲಕ ವಿಶ್ವಕ್ಕೆ ತಿಳಿಸುವ ರಾಯಭಾರಿಯಾಗಬೇಕು ನೀನು, ಅದಕ್ಕೆ ನನ್ನ ಆಶೀರ್ವಾದವಿದೆ'. ಇನ್ನು ನಾನು ನಿಶ್ಚಿಂತೆಯಿಂದ ಅಸುನೀಗಬಲ್ಲೆ' ಎಂದೆ.

'ರವಿವರ್ಮ, ಪಾಚನ್ ನೀವಿಬ್ಬರೂ ನನ್ನನ್ನೆತ್ತಿ ಸ್ವಲ್ಪ ಪದ್ಮಾಸನದಲ್ಲಿ ಕೂಡ್ರಿಸಿ' ಎಂದೆ. ಅವರು ಹಾಗೆಯೇ ಮಾಡಿದರು. ಯೋಗ ಸಾಧನೆಯಿಂದ ನಾನು ಸಂಪಾದಿಸಿಕೊಂಡ ಶಕ್ತಿ ಈಗ ನನ್ನ ನೆರವಿಗೆ ಬಂತು. ನಾನು ಕಣ್ಮುಚ್ಚಿ ಕುಳಿತಂತೆಯೇ ನನ್ನ ಪ್ರಾಣ ಬ್ರಹ್ಮರಂಧ್ರದಿಂದ ಹೊರಬಿತ್ತು.

## ರವಿವರ್ಮ

ಬಹಳ ಹಿಂದೆ ನಾನು ಮುಂಬಯಿಯಿಂದ ಕಿಳಿಮಾನೂರಿಗೆ ಬಂದಾಗ ನನ್ನ ಸೋದರಮಾವ ರಾಜರಾಜವರ್ಮರದ್ದೊಂದು ಪ್ರತಿರೂಪ ತೈಲಚಿತ್ರ ರಚಿಸಿದ್ದೆ. ಅದರಲ್ಲಿ ಅವರ ಕಣ್ಗಳಲಿದ್ದ ಠೀವಿಯೇನು! ಇದೀಗ ತೇಜೋಹೀನವಾದ ಅವರ ಕಣ್ಗಳೇನು! ಅವರ ಅಂತ್ಯ ಕಾಲದಲ್ಲಿ ನಾನು ಅಲ್ಲೇ ಇದ್ದಿದ್ದು ನನಗೆ ಸಮಾಧಾನವಾದರೂ, ಅದೇಕೋ ಈ ಸಾವನ್ನು ನಾನು ಜೀರ್ಣಿಸಿಕೊಳ್ಳಲಾರದೆ ಹೋದೆ. ಅಸಾಧ್ಯವಾದ ಶೂನ್ಯತೆ ಮನದಲ್ಲಿ! ದಿನಗಟ್ಟಲೆ ಕುಂಚವನ್ನೇ ಹಿಡಿಯದೆ ಕುಳಿತುಬಿಡುತ್ತಿದ್ದೆ. ರಾಜವರ್ಮನಿಗಂತೂ ತುಂಬಾ ಸಿಟ್ಟು. ಅಣ್ಣ, ಮಾವ ಹೋದ ದುಃಖ ಎಲ್ಲರಿಗೂ ಇಲ್ಲವೆ! ಸ್ವಂತ ತಂಗಿಯಾದ ಅಮ್ಮನಿಗಿಂತ ನಿನಗೆ ಹೆಚ್ಚೆ? ಅವಳು ದುಃಖವನ್ನು ಪಕ್ಕಕ್ಕೆ ಒತ್ತರಿಸಿ, ಮನೆಯ ಆಡಳಿತವನ್ನು ಕೈಗೆತ್ತಿಕೊಂಡಿಲ್ಲವೆ? ನೀನು ಹೀಗೆ ಮಾಡಬೇಕಾದ ಕೆಲಸಗಳನ್ನೆಲ್ಲಾ ಬದಿಗೊತ್ತಿ ಶೋಕಿಸುತ್ತಾ ಕುಳಿತರೆ ಹೇಗೆ? ಎಷ್ಟೊಂದು ಪತ್ರಗಳು ಬಂದಿವೆ, ಉತ್ತರಿಸಬೇಡವೇ?

ಅಮ್ಮ ನನ್ನ ಬಳಿ ಬಂದು ತಲೆಸವರಿ 'ಕೊಚ್ಚ್, ಅಳಿದವರಿಗಾಗಿ ಅಳುತ್ತಿರುವುದೇ ಬದುಕಿನ ಅರ್ಥವಲ್ಲ, ನೀನಿನ್ನು ಶೋಕಿಸಿದ್ದು ಸಾಕು. ಇದರಿಂದ ಅಳಿದ ಅಣ್ಣನ ಆತ್ಮಕ್ಕೂ ಶಾಂತಿ ಸಿಗುವುದಿಲ್ಲ. ಬೊಂಬಾಯಿಗೆ ಹೋಗಿ ಆಗಬೇಕಾದ ಕೆಲಸಗಳನ್ನು ನೀನುರಾಜ ನೋಡಿಕೊಳ್ಳಿ. ಇಲ್ಲಿ ಗೋದವರ್ಮ ಮಂಗಳ ನನ್ನ ಜೊತೆಗಿರುತ್ತಾರೆ' ಎಂದು ಸಮಾಧಾನ ಹೇಳಿದಳು.

ಅದರಂತೆಯೇ ನಾನು ಬರೋಡಾ ಆಹ್ವಾನ ಸ್ವೀಕರಿಸಿ ಉತ್ತರ ಬರೆದೆ. ಮರುದಿನವೇ ಚಿತ್ರಪಟಗಳೊಂದಿಗೆ ಬೊಂಬಾಯಿಗೆ ಹೋದೆ. ನನ್ನ ಅಚ್ಚರಿಗೆ ಭಾಟಿಯಾ ಬಂಗ್ಲೆಯ ನನ್ನ ಚಿತ್ರ ರಚನಾ ಕೊಠಡಿ ಸ್ವಚ್ಛವಾಗಿತ್ತು. 'ರಾಮಯ್ಯ ನೀನು ತುಂಬಾ ಶ್ರದ್ಧೆವಹಿಸಿ ನೋಡಿಕೊಂಡಿದ್ದೀ' ಎಂದೆ. ಅದಕ್ಕೆ ರಾಮಯ್ಯ 'ವಾರಕ್ಕೆರಡು ಬಾರಿ ಸುಗಂಧಾಬಾಯಿ ಬಂದು ಖುದ್ದಾಗಿ ಅವರೇ ನಿಮ್ಮ ಕೋಣೆ ಸ್ವಚ್ಛಗೊಳಿಸಿ ಹೋಗುತ್ತಿದ್ದರು. ನಮ್ಮನ್ನು ಕೋಣೆಯೊಳಕ್ಕೆ ಬಿಡುತ್ತಲೇ ಇರಲಿಲ್ಲ. ನಾನು ಇಂದೇ ಹೋಗಿ ನೀವು ಬಂದಿರುವ ಸುದ್ದಿ ತಿಳಿಸುತ್ತೇನೆ' ಎಂದ.

ಸುದ್ದಿ ಕೇಳಿದ ತಕ್ಷಣ ಬಂದಳು ಸುಗಂಧ. 'ದಿನವೂ ನನ್ನ ಕುರ್ಚಿಯಲ್ಲಿ ಮಲ್ಲಿಗೆ ಹೂ ಇಡುತ್ತಿದ್ದೆಯಂತೆ, ಇಂದೇಕೆ ಇಟ್ಟಿಲ್ಲ?' ಎಂದೆ.